ಕರುಣೆಯನು ಬಯಲಿಗೆ ಉಣಿಸುವಂತೆ ನಮ್ಮೀ ಕಾಲುವೆ ಹರಿಯುತ್ತಿದೆ. ಹುಟ್ಟಿದ ಸೀಮೆಯನ್ನು ಕಡಿದುಕೊಂಡು ಹೊಟ್ಟೆಪಾಡಿಗಾಗಿ ಹಂಪಿಸೀಮೆಗೆ ಬಂದು ಬಿದ್ದಿರುವ ನನಗೆ, 'ಸಂಬಂಜ ಎಂಬುದು ದೊಡ್ಡದು ಕನಾ' ಎಂದು ವಿಶ್ವಾಸ ತುಂಬುತ್ತಿದೆ. ಎಂತಲೇ ಆಪ್ತಭಾವದಲ್ಲಿ ಕಾಲುವೆಗಿಳಿದು ಬೊಗಸೆಯಲ್ಲಿ ತುಂಬಿಕೊಂಡು ಮುಕ್ಕಳಿಸುತ್ತೇನೆ. ಮನೆಗೆ ಬಂದ ಬಂಧುಗಳ ಕೈಕುಲುಕುವಂತೆ ಕೈಕಾಲಿಳಿಬಿಟ್ಟು ಆಡುತ್ತೇನೆ. ನೀರಲ್ಲಿ ಬಿದ್ದು ಸೆಳವಿನಲ್ಲಿ ತೇಲುತ್ತೇನೆ. ಯಾರೋ ಮೇಲ್ಭಾಗದಲ್ಲಿ ಪೂಜೆ ಮಾಡಿ ತೇಲಿಬಿಟ್ಟ ದೀಪಗಳೂ ನನ್ನ ಜೊತೆಗೆ ಬರುತ್ತವೆ. ಮುಳುಗಿಸುವ ಘಾತಕ ಜಲದಲ್ಲಿ ಅವು ಆರುವ ತನಕ ತೇಲುವುದನ್ನು ಆತಂಕದಿಂದ ಗಮನಿಸುತ್ತೇನೆ. ಯಾಕೆಂದರೆ ಈಜಲು ಜಿಗಿದ ಎಷ್ಟೋ ಹುಡುಗರ ಜೀವವನ್ನು ಈ ಕಾಲುವೆ ಕಸಿದುಕೊಂಡಿದೆ. ಒಣನೆಲಕ್ಕೆ ಹಸಿರಿನ ಜೀವ ತುಂಬುವ ನಿಷ್ಕಳಂಕ ತಿಳಿಜಲ, ಸರಸಕೆ ಬರುವ ಜೀವಗಳನ್ನು ಕೊಲ್ಲುವ ಮೃತ್ಯುಕೂಪವೂ ಆಗಬಲ್ಲದು. ಸೊಸೆಯೆದುರು ಮಗ ಏನೋ ಮಾತಾಡಿದನೆಂದು ತಾಯೊಬ್ಬಳು ಓಡಿಬಂದು ಕಾಲುವೆಗೆ ಹಾರಿದ್ದಳಲ್ಲ. ಕಾಲುವೆಗೆ ಮಾತು ಬಂದಿದ್ದರೆ ಎಷ್ಟೊಂದು ಕತೆ ಹೇಳುತ್ತಿತ್ತೊ?

ಮುಂಗಾರಿನ ಹಂಗಾಮಿನಲ್ಲಿ ಕಾಲುವೆ ನೀರು ಬಗ್ಗಡಗೊಂಡು ಡಬ್ಬಾ ಹೋಟೆಲಿನ ಚಹಾದಂತೆ, 'ಮೊದಲ ದಿನ ಅಳುವೇ ತುಟಿಗೆ ಬಂದ' ನವವಧುವಿನಂತೆ ಮಂಕಾಗಿರುತ್ತದೆ. ಆದರೆ ಮಣ್ಣು ನಿಧಾನಕ್ಕೆ ತಳಕ್ಕಿಳಿದು ಒಂದೇ ತಿಂಗಳಲಿ ಪಚ್ಚೆಯ ರಸವಾಗುತ್ತದೆ. ಹಂಪಿ ಸೀಮೆಯ ಕಲ್ಲುಬೆಟ್ಟಗಳ ನಡುವೆ ಗರಸು ನೆಲದೊಳಗೆ ಹರಿಯುವಾಗ, ಆಫ್ರಿಕಾದ ಮರುಭೂಮಿಯಲ್ಲಿ ಹರಿಯುವ ನೀಲಿನೈಲ್ ಆಗುತ್ತದೆ. ಗದ್ದೆಗೆ ಹರಿವ ಈ ನೀರು, ಬಾಳೆಭತ್ತವಾಗಿ ಕಾಯಿಪಲ್ಲೆಯಾಗಿ ನಮಗೇ ಮರಳುತ್ತದೆಯಷ್ಟೆ. ನೀರುಮಣ್ಣುಗಳ ಈ ಆವರ್ತನ, ಜೀವರಾಶಿಯನ್ನು ಅದೆಷ್ಟೋ ಯುಗಗಳಿಂದ ಪೊರೆಯುತ್ತಿದೆ!

ಐದು ಕಾಲುವೆ ಹರಿವ ನಮ್ಮೂರು ವೆನಿಸ್ ನಗರವೇ ಸೈ. ವೆನಿಸಿನಲ್ಲಿ ಏನೋ ಎಂತೋ, ನಮ್ಮೂರಿನವರ ಎಲ್ಲ ಚಟುವಟಿಕೆ ಕಾಲುವೆ ದಡದಲ್ಲಿ ಜರುಗುತ್ತವೆ. ಮಂದಿ ಜಳಕ ಮಾಡುತ್ತಾರೆ; ಬಟ್ಟೆ–ವಾಹನ ತೊಳೆಯುತ್ತಾರೆ; ಚಿಣ್ಣರು ಬಿಸಿಲಲ್ಲಿ ಜಿಗಿದು ಮೀನಾಗುತ್ತಾರೆ. ಗಣಪತಿಯನ್ನು ವಿಸರ್ಜಿಸುತ್ತಾರೆ; ಎಲ್ಲವೂ ಸರಿ. ಆದರೆ ಕಾಲುವೆಯನ್ನು ಕಸದತೊಟ್ಟಿ ಮಾಡುವುದು ಮಾತ್ರ ಅರ್ಥವಾಗುವುದಿಲ್ಲ. ಹಬ್ಬ ಬಂದರೆ ಸಾಕು, ಬಾಳೆಕಂಬ, ಒಣಹೂವು ತೇಲಿತೇಲಿ ಬರುತ್ತವೆ. ಸತ್ತ ಪ್ರಾಣಿಯ ಕಳೇಬರ, ಕೋಳಿಪುಕ್ಕದ ಚೀಲ, ಪ್ಲಾಸ್ಟಿಕ್ ಬಾಟಲಿ, ಮೃತರ ಹಾಸಿಗೆ–ದಿಂಬು, ಮನೆಕಸದ ಪೊಟ್ಟಣ. ಹರಿವ ನೀರೆಂದರೆ ಯಾಕಿಷ್ಟು ಸದರ? ಮುಂದಿನೂರಿಗೆ ನೀರನ್ನು ಕೆಡಿಸದೆ ಕಳಿಸುವ ಹೊಣೆ ನಮ್ಮದಲ್ಲವೇ? ಇದಕ್ಕೇ ಇರಬೇಕು, ಸಿಟ್ಟಾದ ಕಾಲುವೆ ನಮ್ಮನ್ನು ಶಿಕ್ಷಿಸುವಂತೆ ಬೇಸಿಗೆಯಲ್ಲಿ ರಜೆ ತೆಗೆದುಕೊಳ್ಳುತ್ತದೆ. ಆಗದು ಬಾಯಿತೆರೆದ ಹೆಣದಂತೆ ಭಯ ಹುಟ್ಟಿಸುತ್ತದೆ. ಭಣಗುಡುವ ಅದರ ಒಳಗೋಡೆಯ ಮೈಗೆ ವಿಸರ್ಜಿಸಿದ ಹಳೆಬಟ್ಟೆ ಅಂಟಿಕೊಂಡು, ಬೇಸರವೇ ತೋರಣಗಟ್ಟಿದಂತೆ ಕಾಣುತ್ತದೆ.

ವಿಶೇಷವೆಂದರೆ, ನಮ್ಮ ಕಾಲುವೆ ದಂಡೆಯ ಮೇಲೆ ಹೆಂಗಸರು ಬಟ್ಟೆ ಒಗೆಯುತ್ತಿದ್ದರೆ ಗಂಡಸರು ಜಾಲಾಡಿ ಹಿಂಡಿ ಒಣಹಾಕುವರು. ಹಿರೀಕರು ಹೆಂಡತಿಯ ಮಾತು ಕೇಳುವ ಗಂಡನನ್ನು ನಿಂದಿಸಲು 'ಹೆಂಡತಿ ಸೀರೆ ಹಿಂಡೋನು', 'ಲಂಗ ತೊಳೆಯೋನು' ಎನ್ನುವುದುಂಟು. ಹೆಂಡತಿಯ ಬಟ್ಟೆ ಒಗೆಯುವುದು ಹೇಗೆ ತಪ್ಪೋ ನನಗಿನ್ನೂ ಅರ್ಥವಾಗಿಲ್ಲ. ಯಾವ ಸ್ತ್ರೀವಾದವನ್ನೂ ಓದದ ಪುರುಷಸಿಂಹಗಳು ಇಲ್ಲಿ ಮಡದಿಯರ ಸರಿಸಮ ನಿಂತು ಬಟ್ಟೆ ಸೆಣೆಯುವುದನ್ನು ಕಾಣುವಾಗ ಅಭಿಮಾನ ಮೂಡುತ್ತದೆ. ಎಲ್ಲಿದ್ದರೂ ತನ್ನ ಸಮಮಟ್ಟ ಉಳಿಸಿಕೊಳ್ಳುವ ನೀರಿನ ಸಂಗದ ಪರಿಣಾಮವಿದು. ಬಟ್ಟೆ ಒಗೆಯುವ ಜಾಗಗಳು ಊರಸುದ್ದಿ ಚರ್ಚಿಸುವ, ಸುಖದುಃಖ ಹಂಚಿಕೊಳ್ಳುವ ವೇದಿಕೆಗಳೂ ಹೌದು. ಕಾಟಕೊಡುವ ನಾದಿನಿ, ಗೊಣಗಾಡುವ ಅತ್ತೆ, ಮಾತು ಕೇಳದ ಮಗ, ಕುಡಿದು ಬರುವ ಗಂಡ, ಮುಂತಾದವರ ಮೇಲೆ ರೊಚ್ಚು ತೀರಿಸಿಕೊಳ್ಳುವುದಕ್ಕೂ ಬಟ್ಟೆ ಸೆಣೆಯುವುದಕ್ಕೂ ಸಂಬಂಧವಿದೆ. ವಾಶಿಂಗ್ ಮಿಶಿನ್ನಿನಲ್ಲಿ ಈ ಮಾನಸಿಕ ಬಿಡುಗಡೆ ಸಿಗುವುದಿಲ್ಲ.

ದಂಡೆಯ ಮೇಲೆ ಬುತ್ತಿ ಹಿಡಿದು ಹೊರಟ ಕಟ್ಟಡ ಕೆಲಸಗಾರರ ಹಾಗೂ ವಾಯುವಿಹಾರಿಗಳ ಮುಖಾಮುಖಿ ನಿತ್ಯವೂ ನಡೆಯುತ್ತದೆ. ಒಬ್ಬರು ಗೇಣುಹೊಟ್ಟೆ ಹೊರೆಯುವವರು; ಮತ್ತೊಬ್ಬರು ಕೊಬ್ಬನ್ನು ಕರಗಿಸುವವರು. ಮುಂಜಾನೆ ಕಲರವ ಮಾಡುತ್ತ ಬರುವ ಕೆಲಸಗಾರರು, ಸಂಜೆ ದಣಿದು ಮಾತಿಲ್ಲದೆ ಮನೆಸೇರಲು ತವಕಿಸುವರು. ಆದರೆ ಗದ್ದೆಗೆಲಸದವರ ಪರಿಯೇ ಬೇರೆ. ಅವರು ಹುಲ್ಲುಹೊರೆ ಹೊತ್ತು, ಕುರಿಮರಿ ಹಿಂದೆ ಬಿಟ್ಟುಕೊಂಡು ವಿರಾಮದಲ್ಲಿ ಗಳಹುತ್ತ ಬರುವರು. ಒಮ್ಮೆ ಕುರಿಯೊಡತಿಗೆ 'ಏನವ್ವಾ, ಇದು ಬೆಳದ ಮೇಲೆ ಏನು ಮಾಡ್ತೀಯ? ಮಾರತಿಯೇನು?' ಎಂದೆ. 'ಇಲ್ಲಯ್ಯ, ದುರ್ಗಮ್ಮ ಹಬ್ಬಕ್ಕ ಬ್ಯಾಟೆಕೊಟ್ಟು ನಂಟರಿಗೆ ಉಂಬಾಕಿಕ್ತೀನಿ' ಎಂದುಲಿದಳು. 'ಕೊಂದಹರೆಂಬುದನರಿಯದೆ' ಚಿನ್ನಾಟವಾಡುತ್ತ ಹಿಂಬಾಲಿಸುತ್ತಿದ್ದ ಕುರಿಮರಿಗೆ ಈ ಮಾತು ಕೇಳಿರಲಿಕ್ಕಿಲ್ಲ.

ವಾಯುವಿಹಾರಿಗಳಲ್ಲಿ ಮುಪ್ಪು ಕಾಯಿಲೆಗಳ ಜೊತೆ ಹೋರಾಡುತ್ತಿರುವವರ ಸಂಖ್ಯೆಯೇ ಹೆಚ್ಚು. ಇವರೊಟ್ಟಿಗೆ ಮೈಯನ್ನು ದೃಢವಾಗಿ ಇಟ್ಟುಕೊಳ್ಳುವವರೂ ಬರುತ್ತಾರೆ. ಇವರು ತೋಳಿಲ್ಲದ ಜರ್ಕಿನ್ ತೊಟ್ಟು, ಹುರಿಗಟ್ಟಿದ ಬಾಹುಗಳನ್ನು ಪ್ರದರ್ಶಿಸುತ್ತ, ವಯಸ್ಸಾದವರ ಹೊಟ್ಟೆ ಉರಿಸುವರು. ಕೆಲವರು ಮಡದಿಯ ಮುಖವನ್ನು ಸಾರ್ವಜನಿಕರು ನೋಡದಂತೆ ಜವನಿಕೆಯಿಂದ ಮುಚ್ಚಿ, ತಾವು ಜೀನ್ಸ್‌ಪ್ಯಾಂಟು, ಟೀಶರ್ಟು, ಕ್ರೀಡಾ ಶೂ ಧರಿಸಿ ಬರುವರು. ದಂಡೆಯ ಮೇಲೆ ಕೆಲವು ಎದೆಕರಗಿಸುವ ದೃಶ್ಯಗಳೂ ಇವೆ. ಉದಾಹರಣೆಗೆ, ಮಗನ ಮುರಿದ ಕಾಲಿಗೆ ಜೋಡಿಸಿದ ಕೃತಕಕಾಲಿನ ಅಭ್ಯಾಸ ಮಾಡಿಸಲೆಂದು ಕೈಹಿಡಿದು ಬರುವ ತಾಯಿ; ಸ್ಥೂಲಕಾಯದ ಮಗಳಿಗೆ ವ್ಯಾಯಾಮ ಮಾಡಿಸಲು ಬರುವ ತಂದೆ; ಬೇನೆಪೀಡಿತ ತಾಯನ್ನು ಕರೆದುಕೊಂಡು – ತನ್ನ ಪ್ರಾಯದ ಬಿರುಸನ್ನು ಆಕೆಯ ಮೆಲುನಡಿಗೆಗೆ ಹೊಂದಿಸುತ್ತ – ಬರುವ ಯುವಕ. ಈ ಯುವಕ ಕೆಲವು ದಿನಗಳ ಬಳಿಕ ಒಬ್ಬನೇ ಬರತೊಡಗಿದ. ತಾಯಿಯವರು ಯಾಕೆ ಬರುತ್ತಿಲ್ಲ ಎಂದು ಕೇಳಲು ಧೈರ್ಯ ಸಾಲಲಿಲ್ಲ. ಘೋರಸತ್ಯದ ಮೇಲಿನ ಪರದೆಯನ್ನು ಯಾರು ತಾನೇ ಸರಿಸಿ ನೋಡುವರು?

ದಂಡೆಯ ಮೇಲೆ ಬರುವ ವಾಯುವಿಹಾರಿಗಳ ವೇಷಭೂಷಣ, ಮಾತುಕತೆ, ವರ್ತನೆ ಬಹುರೂಪಿ. ಹುಡುಗರು ಸೈಕಲ್ಲು ಹೊಡೆಯುತ್ತ, ನೀರಿಗೆ ಕಲ್ಲೊಗೆಯುತ್ತ, ರೈಲ್ವೆಸೇತುವೆಯಿಂದ ನೀರಿಗೆ ನೆಗೆಯುತ್ತ, ಮರದೊಳಗಿನ ಹಕ್ಕಿ ಎಬ್ಬಿಸುತ್ತ, ಕಲಕಲ ಮಾಡುತ್ತವೆ. ಕೆಲವರು ಮೌನವಾಗಿ ಚಲಿಸಿದರೆ, ಕೆಲವರು ಏಕಪಾತ್ರಾಭಿನಯ ಮಾಡುವಂತೆ ಒಬ್ಬರೇ ಮಾತಾಡಿಕೊಳ್ಳುವವರು. ತರುಣರು ಮೊಬೈಲು ಹಾಡನ್ನು ಕೇಳುತ್ತ, ಸಂಜೆಮುಂಜಾನೆಯ ಮೌನ ನುಸುಳದಂತೆ ಕಿವಿಕದವನ್ನು ಬಂದ್ ಮಾಡಿಕೊಂಡಿರುವರು. ಇವರಲ್ಲೆಲ್ಲ ಮೋಜೆನಿಸುವುದು ಕಂಡವರ ಮನೆಯ ಮುಂದೆ ಕಕ್ಕ ಮಾಡಿಸುವುದೊಂದು ಘನಕಾರ್ಯ ಎಂಬಂತೆ ಬರುವ ನಾಯಿ ಮಾಲೀಕರದು. ಈ ಮಹನೀಯರು ನಾಯನ್ನು ತಿರುಗಾಟಕ್ಕೆ ತಂದಿದ್ದಾರೋ ನಾಯಿಯೇ ಇವರನ್ನು ಎಳೆದುಕೊಂಡು ಬಂದಿದೆಯೋ ಗೊತ್ತಾಗುವುದಿಲ್ಲ. ತಮ್ಮ ಜಾತಿಶ್ವಾನವು ದೇಶೀ ಸೊಣಗಗಳ ಸಂಗ ಮಾಡದಂತೆ ತಡೆಯುವುದರಲ್ಲೇ ಅವರ ಅರ್ಧಶಕ್ತಿ ಬಸಿಯುತ್ತದೆ. ಮಾನವ ಸಮಾಜದಲ್ಲಿರುವ ಭೇದಭಾವ ಅರಿಯದ ಆ ಪ್ರಾಣಿಗಳಾದರೊ, 'ಶ್ವಾನಜಾತಿ ತಾನೊಂದೆ ವಲಂ' ಎಂಬಂತೆ ವರ್ತಿಸುತ್ತ, ದಂಡೆಯನ್ನು ವರ–ವಧು ವಿನಿಮಯ ಕೇಂದ್ರ ಮಾಡುತ್ತವೆ. ಏನೇಯಿರಲಿ, ನಾಯಿಗಳಿಂದ ಮನುಷ್ಯರು ಕಲಿಯಬೇಕಾದ ಕೆಲವು ಪಾಠಗಳಿವೆ ಎಂದು ನನ್ನ ದೃಢವಾದ ನಂಬಿಕೆ.

ನಮ್ಮ ಕಾಲುವೆದಂಡೆ ವಾಕ್ ಸ್ವಾತಂತ್ರ್ಯದ ವೇದಿಕೆಯಾಗಿದೆ. ಮನೆಯಲ್ಲಿ ಕದ್ದುಮುಚ್ಚಿ ಆಡಬೇಕಾದ ಮಾತನ್ನು ಮಂದಿ ನಿರ್ಭೀತಿಯಿಂದ ಆಡುವರು. ಮಾತುಕತೆಯನ್ನು ಯಾರೂ ಕದ್ದು

